# ಮತ್ತೆ ಬಣ್ಣ ತುಂಬಿಕೊಂಡ ನೆನಪಿನ ನವಿಲುಗರಿ



ಉತ್ತಮ ಪಿನಾಕಿನಿ ನದಿಯ ಜತೆ ನಮಗೆ ಭಾವನಾತ್ಮಕ, ಆರ್ಥಿಕ ಸಂಬಂಧಗಳು ಗಟ್ಟಿಯಾಗಿವೆ. ನಾವು ಚಿಕ್ಕವರಿದ್ದಾಗ ನಂದಿಬೆಟ್ಟದಲ್ಲಿ ಮಳೆ ಆದರೆ ಒಂದೆರಡು ಗಂಟೆಗಳಲ್ಲಿ ಉತ್ತರ ಪಿನಾಕಿನಿಯಲ್ಲಿ ನೀರು ಹರಿಯುತ್ತಿತ್ತು.

ನಮ್ಮ ಜಮೀನಿನ ಪಕ್ಕದ ಹೊಲದ ಪುಟ್ಟ ಮತ್ತು ಗಂಗಾಧರ ಎಂಬ ಅಣ್ಣ ತಮ್ಮಂದಿರುವ ಗೋಲಿ ಆಡುವಾಗ ಗುಣಿ ತೆಗೆಯುತ್ತಿದ್ದರು. ಹುಡುಗಾಟದಿಂದಾಗಿ ಆ ಗುಣಿಯನ್ನು ದೊಡ್ಡದಾಗಿಯೇ ತೆಗೆದರು. ಆದರಲ್ಲಿ ನೀರು ದೊರೆಯಿತು. ಗುಣಿಯಲ್ಲಿ ಸುಮಾರು 30–35 ವರ್ಷ ನೀರು ಬಂತು. ಹೀಗೆ ಉತ್ತರ ಪಿನಾಕಿನಿ ಕಾರಣದಿಂದಾಗಿ ಅಂತರ್ಜಲ ಉತ್ತಮವಾಗಿತ್ತು. ನಮ್ಮ ಮನೆ ಇದ್ದಿದ್ದು ಉತ್ತರ ಪಿನಾಕಿನಿ ನದಿಯ ತಟದಲ್ಲಿ. ಕೆಲವೊಮ್ಮೆ ನಮ್ಮ ಮನೆಯವರೆಗೂ ನೀರು ಬರುತ್ತಿತ್ತು.

ಉತ್ತರ ಪಿನಾಕಿನಿ ಕಾರಣದಿಂದ ಗೌರಿಬಿದನೂರು ತಾಲ್ಲೂಕಿನಲ್ಲಿ ಹೆಚ್ಚು ಕಬ್ಬು ಬೆಳೆಯಲಾಗುತ್ತಿತ್ತು. ನಾನು ರೈತ ಹೋರಾಟದಲ್ಲಿ ಭಾಗಿಯಾದವನು. ಕಬ್ಬು ಅರೆಯುವ ಸಾಮರ್ಥ್ಯಕ್ಕಿಂತ ಹೆಚ್ಚು ಕಬ್ಬು ಕಾರ್ಖಾನೆಗೆ ಬರುತ್ತಿತ್ತು. ಆಲೆಮನೆಗಳು ಹೇರಳವಾಗಿದ್ದವು. ನಂತರದ ದಿನಗಳಲ್ಲಿ ಕಬ್ಬು ಪೂರೈಕೆ ಆಗದೆ ಕಾರ್ಖಾನೆ ಬಂದ್ ಆಯಿತು. ಚಿಕ್ಕವರಿದ್ದಾಗ ನದಿಯಲ್ಲಿ ಗಣೇಶನನ್ನು ವಿಸರ್ಜಿಸುತ್ತಿದ್ದೆವು. ಗೌರಿ, ಗಣೇಶ ಹಬ್ಬಗಳನ್ನು ಈ ನದಿಯ ತಟದಲ್ಲಿ ಆಚರಿಸುತ್ತಿದ್ದೆವು.

ಹಂತ ಹಂತವಾಗಿ ನದಿಯ ಹರಿವು ಕಡಿಮೆ ಆಯಿತು. ಕೆರೆ, ಕಟ್ಟೆಗಳು, ಬಾವಿಗಳಲ್ಲಿ ನೀರು ಕಾಣದಾಯಿತು. ಈಗ ಹರಿಯುತ್ತಿರುವ ನದಿಯನ್ನು ನಾನು ಮೂರು ದಶಕಗಳ ಹಿಂದೆ ನೋಡಿದ್ದೆ.

—ಟಿ.ಎನ್. ಸೀತಾರಾಮ್ ನಟ, ನಿರ್ದೇಶಕ

